೧೩. ಭೂನ್ಯಾಯ ಮಂಡಲಿ ಸಭೆಗಳನ್ನು ಅಧಿವೇಶನದ ವೇಳೆ ನಡೆಸದಿರಂವುದು.

ಶ್ರೀ ಬಿ. ಹೆಚ್. ಯಂಕಾಚಾಯಕ (ಹರಪನಹಳ್ಳಿ).--ಭೂನ್ಯಾಯ ಮಂಡಲಿಯಂ ಸಭೆ ನಡೆಸುವ ಬಗ್ಗೆ ಇದೇ ಸದನದಲ್ಲಿ ಚರ್ಚೆ ನಡೆದಿದ್ದು ಶಾಸನ ಸಭೆಗಳು ನಡೆಯುವ ಸಂದರ್ಭದಲ್ಲಿ. ಭೂನ್ಯಾಯ ಮಂಡಲಿಯ ಸಭೆಗಳನ್ನು ನಡೆಸಬಾರದೆಂದು ಸೂಚಿಸಲಾಗಿದ್ದು ಸರಕಾರದವರೂ ಒಪ್ಪಿಗೆ ನೀಡಿದ್ದರು. ಆದರೆ ಹರಪನಹಳ್ಳಿ ಭೂನ್ಯಾಯ ಮಂಡಲಿಯವರು ಜಿಲ್ಲಾಪರಿಷತ್ ಚುನಾವಣಾ ದಿನವೇ ಎಂದರೆ ಫೆಬ್ರವರಿ ೨೩ ಮತ್ತು ೨೪ ರಂದು ಹಾಗೂ ಮಾರ್ಚ್ ೨ ಮತ್ತು ೩ನೇ ತಾರೀಖಿನ ಸಭೆಗಳನ್ನು ನಡೆಸಿದ್ದಾರೆ. ಮತ್ತೆ ಇದೇ ತಿಂಗಳು ೧೨ನೇ ತಾರೀಖಿನ ಸಭೆ ನಡೆಸುವ ಬಗ್ಗೆ ಪತ್ರ ಬರೆದಿದ್ದಾರೆ. ಹೀಗಾಗಿ ಸದನದಲ್ಲಿ ಹಾಜರಿರಬೇಕೇ ಇಲ್ಲವೇ ಭೂನ್ಯಾಯ ಮಂಡಲಿಯ ಸಭೆಯಲ್ಲಿ ಹಾಜರಿರಬೇಕೇ ಎಂಬ ಸಮಸ್ಯೆ ಉದ್ಭವಿಸಿತ್ತದೆ. ಭೂನ್ಯಾಯ ಮಂಡಲಿ ಸಭೆಗೆ ಹೋಗದಿದ್ದರೆ ಅವರ ಇಷ್ಟಬಿಂದಂತೆ ತೀರ್ಮಾನ ಹೆಗೆದುಕೊಳ್ಳುತ್ತಾರೆ. ಇದರಿಂದ ನಮ್ಮ ಪಕ್ಷದ ಸದಸ್ಯರಿಗೆ ಈ ರೀತಿ ತೊಂದರೆಯಾಗುತ್ತಾ ಇರುವುದರಿಂದ ಸದರಿ ಭೂನ್ಯಾಯ ಮಂಡಲಿಯ ಸಭೆಗಳನ್ನು ಶಾಸನಸಭೆ ಅಧಿವೇಶನಗಳು ನಡೆಯುವಾಗ ನಡೆಸದಂತೆ ರಾಜ್ಯದ ಎಲ್ಲಾ ಭೂನ್ಯಾಯ ಮಂಡಲಿಗಳಿಗೂ ಕೂಡಲೇ ಸೂಕ್ತ ಆದೇಶ ನೀಡ ಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ --ಮಾನ್ಯ ಅಧ್ಯಕ್ಷರೆ, ಕರ್ನಾಟಕ ಭೂ ಸುಧಾರಣಾ ಕಾನೂನು ೧೯೬೧ರ ಕಲಂ ೪೮ರ ಮೇರೆಗೆ ಭೂನ್ಯಾಯ ಮಂಡಳಿಗಳು ರಚನೆಯಾಗಿದ್ದು ಗೇಣಿದಾರರಿಗೆ ಹಾಗೂ ಇತರರಿಗೆ ತೀವ್ರವಾದ ನ್ಯಾಯ ಒದಗಿಸುವುದು ಭೂ ನ್ಯಾಯ ಮಂಡಳಿಗಳ ಕರ್ತವ್ಯ. ಈ ಭೂ ನ್ಯಾಯ ಮಂಡಲಿಗಳಿಗೆ ಉಪ ವಿಭಾಗಾಧಿಕಾರಿ ಅಥವಾ ತತ್ಸಮಾನವಾದ ಹುದ್ದೆಗಳ ಅಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ಮತ್ತು ನಾಲ್ಕು ಸರ್ಕಾರೇತರ ಸದಸ್ಯರುಗಳು ನಾಮಕರಣ ಗೊಂಡಿರುತ್ತಾರೆ. ಈ ನಾಲ್ಕು ಜನರು ಸಮಾಜದ ವಿವಿಧ ವರ್ಗಗಳಿಂದ ಬಂದಿರುವವರಾಗಿರುತ್ತಾರೆ. ಈ ಭೂ ನ್ಯಾಯ ಮಂಡಲಿಗಳು ತೀವ್ರವಾಗಿ ಕೆಲಸ ಮಾಡಿದರೆ ಸಾಮಾಜಿಕ ನ್ಯಾಯ ತೀವ್ರಗತಿಯಲ್ಲಿ ಸಿಗಂತ್ತದೆ. ಕೋರಂ ಇದ್ದಾಗ್ಯೂ ಕೆಲಸ ಮಾಡದಿದ್ದರೆ ಸರ್ಕಾರಕ್ಕೆ ವೆಚ್ಚ ಉಂಟಾಗುವುದಲ್ಲದೆ ಸಾಮಾಜಿಕ ನ್ಯಾಯಕ್ಕೂ ಧಕ್ಕೆ ಆಗಂತ್ತದೆ. ಕಾರಣ, ಪ್ರತಿ ಚುನಾವಣೆ ಬಂದಾಗ ನಿಧಾನ ಮಂಡಲದ ಅಧಿವೇಶನ ನಡೆದಾಗ ಭೂ ನ್ಯಾಯ ಮಂಡಲಿಗಳು ಕಾರ್ಯನಿರ್ವಹಿಸದೆ ಇದ್ದರೆ ಪ್ರಗತಿ ಕುಂಠಿತಕೊಳ್ಳುತ್ತದೆಯಲ್ಲದೆ ಕೋರಂ ಇದ್ದಾಗ್ಯೂ ಭೂ ನ್ಯಾಯ ಮಂಡಲಗಳ ಸಭೆ ನಡೆಸಬಾರದೆಂದು ಸೂಚನೆ ನೀಡುವುದು ಕಾನೂನಿನ ಪ್ರಕಾರ ಸಮಂಜಸವಾಗುವುದಿಲ್ಲ. ಆದರೂ ಆದಷ್ಟು ಸದಸ್ಯರುಗಳಿಗೆ ಅನುಕೂಲವಾಗತಕ್ಕಂಥ ದಿನಾಂಕೆಗಳನ್ನು ಗೊತ್ತು ಮಾಡುವಂತೆ ತಿಳಿಸುತ್ತೇನೆ.

ವಿಶ್ವೇಯಂ ಕಾರ್ಯ ಕಲಾಪಗಳು

೧೯೮೭-೮೮ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ ಮತ್ತು ಮಂಜೂರಾತಿ.

ಅ. ಕ್ರ. ೩೪-ಸಣ್ಣ ನೀರಾವರಿ

೩೫-ನೀರಾವರಿ, ಒಳಚರಂಡಿ ಇತ್ಯಾದಿ

೪೪-ಲೋಕೋಪಯೋಗಿ ಇಲಾಖೆ

೪೫-ಕಟ್ಟಡಗಳು

೪೬-ರಸ್ತೆಗಳು ಮತ್ತು ಸೇತುವೆಗಳು

೪೭-ಬಂದರು.

ಅಧ್ಯಕ್ಷರು.--ಬೇಡಿಕೆಗಳ ಮೇಲಿನ ಚರ್ಚೆ ಮುಂದುವರಿಯುವುದು. ಇವತ್ತು ೪ ಗಂಟೆಗೆ ಉತ್ತರ ಪ್ರಾರಂಭವಾಗುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಗುರುಮಿಠ್ಕಲ್).--ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಮಂತ್ರಿಗಳು ಮಂಡಿಸಿದಂಥ ಬೇಡಿಕೆಗಳನ್ನು ವಿರೋಧಿಸುತ್ತಾ, ಅವರು ಹಾಕಿಕೊಂಡಿರುವಂಥ ಕೆಲವು ಕಾರ್ಯಕ್ರಮಗಳ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಇದಂ ವಿಶೇಷವಾದ ಹಾಗೂ